of the Departments are forcing some of the clerks to go out of their Districts. Such people will worry not only Ministers, but the M.L.As. and other officers also. To prevent this, will the Government be pleased to issue circulars to prevent such transfer?

Sri B. D. JATTI.—Perhaps, the Hon'ble Member is more pestered by Government servants. If he avoids it, he will do a great service to the Government.

1-30 P.M.

Prevention of Cow Slaughter.

*Q.—252. Sri M. HANUMANTHIAH (Nelamangala).—

Will the Government be pleased to state:—

(*a*) whether it is a fact that the Prevention of Cow Slaughter Act is in force in State;

(*b*) whether they are aware that aged cows are being taken to the Cantonment Area on the public road of Tumkur-Bangalore for being slaughtered;

(*c*) the action taken against persons responsible?

*A.—Sri T. SUBRAMANYA (Minister for Law, Labour and Local Self-Government).—

(*a*) The Mysore Prevention of Cow Slaughter Act, 1948 is in force in the Districts of erstwhile Mysore State, except in Bellary District.

(*b*) No such instances have come to notice.

(*c*) Does not arise in view of reply to (*b*) above.

ಶ್ರೀ ಎಂ. ಹನುಮಂತಯ್ಯ.— (ಬ) ಗೆ ಉತ್ತರವಾಗಿ ಸರ್ಕಾರದವರ ಗಮನಕ್ಕೆ ಬಂದಿಲ್ಲವೆಂದು ತಿಳಿಸಲಾಗಿದೆ. ಗಮನಕ್ಕೆ ತಂದರೆ ಏನು ಮಾಡುತ್ತೀರಿ?

†ಶ್ರೀ ಟಿ. ಸುಬ್ರಹ್ಮಣ್ಯ.—ಆಗ ಆಲೋಚನೆ ಮಾಡುತ್ತೇವೆ.

ಶ್ರೀ ಎಂ. ಹನುಮಂತಯ್ಯ.—ಕಂಚೋನ್‌ಮೆಂಟ್‌ನಲ್ಲಿ ನೂರಾರು ರಾಸುಗಳ ವಧೆಯಾಗಿ ಆ ಮಾಂಸ ಅಲ್ಲಿ ಮಾರಾಟವಾಗುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದೇ ಇಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ಗೋವಧೆ ಎಲ್ಲೆಲ್ಲಿ ನಡೆಯುತ್ತದೆಂದು ವರದಿಗಳು ಬರುತ್ತವೋ ಅಲ್ಲೆಲ್ಲಾ ತಪ್ಪಿಸ್ಥರನ್ನು ಹಿಡಿದು ಶಿಕ್ಷೆ ಮಾಡಿಸುತ್ತಿದ್ದೇವೆ. ಇದನ್ನು ತಡೆಗಟ್ಟುವುದಕ್ಕಾಗಿ ಒಂದು ಸ್ಪೆಷಲ್ ಸ್ಕ್ವಾಡನ್ನೇ ಇಟ್ಟಿದ್ದೇವೆ.

Sri J. B. MALLARADHYA.—With reference to reply to (*a*), is it also in force in all the integrated areas of the State?

Sri T. SUBRAMANYA.—No.

ಶ್ರೀ ಜೆ. ಬಿ. ಮಲ್ಲಾರಾಧ್ಯ.—"Except in Bellary District" ಎಂದರೆ ಅರ್ಥವೇನು?

Sri T. SUBRAMANYA.—The Mysore Prevention of Cow Slaughter Act, 1948 is in force in the Districts of the erstwhile Mysore State, except in Bellary District.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅದಕ್ಕೆ ಕಾರಣವೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಆ ಕಾರಣ ಮಾನ್ಯ ಸದಸ್ಯರಿಗೂ ಗೊತ್ತಿದೆ. ಈ ಅಕ್ಟನ್ನು ಆ ಜಿಲ್ಲೆಗೆ ಅಪ್ಲೈ ಮಾಡ ಬೇಕೆಂದು ವಿಚಾರ ಮಾಡುತ್ತಿದ್ದಾಗ ಹೈಕೋರ್ಟಿನಲ್ಲಿ ಒಂದು ರಿಟ್ ಪೆಟಿಷನ್ ದಾಖಲಾಗಿದೆ. ಅದರ ತೀರ್ಮಾನವನ್ನು ಕಾಯುತ್ತಿದ್ದೇವೆ.

ಶ್ರೀ ಕುಂದೂರು ರುದ್ರಪ್ಪ.—ಸಹಸ್ರಾರು ದನಗಳನ್ನು ಮೈಸೂರು ದೇಶದ ಗಡಿ ಸರಹದ್ದಿಗೆ ತೆಗೆದುಕೊಂಡು ಹೋಗಿ—ಮದ್ರಾಸ್ ಗಡಿ ಪ್ರದೇಶಗಳಲ್ಲಿ ಅವನ್ನು ಕೊಲೆ ಮಾಡಿ ಅಲ್ಲಿಂದ ಮಾಂಸವನ್ನು ತಂದು ಕಂಚೋನ್‌ಮೆಂಟಿನಲ್ಲಿ ಮಾರಾಟ ಮಾಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಎಲ್ಲೆಲ್ಲಿ ಗಮನಕ್ಕೆ ಬಂದಿದೆಯೋ ಅಲ್ಲಲ್ಲಿ ಕಾನೂನಿನ ಪ್ರಕಾರ ಅವರನ್ನು ಶಿಕ್ಷೆಗೊಳಗು ಮಾಡುತ್ತಿದ್ದೇವೆಂದು ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಟಿ. ಸುಬ್ರಹ್ಮಣ್ಯ.—ಸಹಸ್ರಾರು ದನಗಳನ್ನು ಕೊಲೆ ಮಾಡುತ್ತಿದ್ದಾರೆಂಬ ಅಂಶವನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿದ್ದರೆ ಆ ವಿಚಾರ ನಮ್ಮ ಗಮನಕ್ಕೆ ಬಂದೇ ಬರುತ್ತಿತ್ತು. ಸುಮ್ಮನೆ ಏನೋ ಆ ರೀತಿ ಅವರಿವರು ಕೂಗುತ್ತಿದ್ದಾರೆಂದು ಅದನ್ನೇ ಒಂದು ದೊಡ್ಡದಾಗಿ ಮಾಡುವುದು ಸರಿಯಲ್ಲ. ಅದಕ್ಕಾಗಿಯೇ ಸ್ಪೆಷಲ್ ಪೋಲೀಸ್ ಸಿಬ್ಬಂದಿಯನ್ನು ಇಟ್ಟಿದ್ದೇವೆ. ಅವರು ನಿಗಾ ಇಟ್ಟು ನೋಡುತ್ತಿದ್ದಾರೆ.

Sri S. D. KOTHAVALE.—Are the Government aware that there is a similar statute in force in Bombay area? If so, whether it is being properly enforced?

Sri T. SUBRAMANYA.—Whatever laws are there are tried to be implemented very strictly.

ಶ್ರೀ ಟಿ. ಹನುಮಯ್ಯ.—ಮದ್ರಾಸಿನಿಂದ 'ಬೀಫ್' ಬರುತ್ತಿದೆಯೆಂದು ಹೇಳಿ ಕಂಚೋನ್‌ಮೆಂಟಿನಲ್ಲೇ ಗೋವುಗಳನ್ನು ಕೊಂದು ಮಾಂಸ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಇವೇ ದೂರುಗಳು ಸರ್ಕಾರದವರ ಗಮನಕ್ಕೆ ಅನೇಕಾವರ್ತಿ ಬಂದಿರುತ್ತವೆ. ಅದರಲ್ಲಿ ಅಷ್ಟೇನೂ ಹುರುಳಿಲ್ಲ. ಮದ್ರಾಸಿನಿಂದ ಬೀಫ್ ಬರುತ್ತಿದೆ; ಇಲ್ಲಿ ಮಾರಾಟವಾಗುತ್ತಿದೆ.

ಶ್ರೀ ಟಿ. ಹನುಮಯ್ಯ.—ಇಲ್ಲೀ ಪಕ್ಕದ ಹಳ್ಳಿಗಳಲ್ಲಿ ಗೋವುಗಳನ್ನು ಕೊರೆ ಮಾಡಿ ಆ ಮಾಂಸವನ್ನು ಕಂಟೋನ್‌ಮೆಂಟ್ ಮಾರ್ಕೆಟ್ಟಿನಲ್ಲಿ ಮಾರಾಟಮಾಡುತ್ತಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—ನಾನು ಉಂಟು ಎಂದೂ ಹೇಳುವುದಿಲ್ಲ, ಇಲ್ಲ ಎಂದೂ ಹೇಳುವುದಿಲ್ಲ. ನಮ್ಮ ಗಮನಕ್ಕೆ ಬಂದ ಕಡೆಗಳಲ್ಲೆಲ್ಲ ತಪ್ಪಿತಸ್ಥರನ್ನು ಹಿಡಿದು ಶಿಕ್ಷೆಗೊಳಗು ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಹೊಸದಾಗಿ ಸೇರಿದ ಕರ್ಣಾಟಕ ಭಾಗದಲ್ಲೆಲ್ಲಾ ಈ ಗೋಹತ್ಯ ನಡೆಯುತ್ತಲೇ ಇದ್ದರೂ ಸರ್ಕಾರದವರು ತಡೆಗಟ್ಟಲು ಏನು ಕಾರ್ಯ ಕೈಗೊಂಡಿದ್ದಾರೆ?

ಶ್ರೀ ಟಿ. ಸುಬ್ರಹ್ಮಣ್ಯ.—ಇದಕ್ಕಾಗಲೇ ಉತ್ತರ ಹೇಳಿದ್ದೇನೆ. ಇಡಿಯ ರಾಜ್ಯಕ್ಕೆಲ್ಲ ಅನ್ವಯಿಸುವಂಥ ಒಂದು ಸಮಗ್ರ ಶಾಸನವನ್ನು ರಚಿಸಬೇಕೆಂಬ ಉದ್ದೇಶ ಸರ್ಕಾರಕ್ಕಿದೆ. ಆದರೆ ಅದನ್ನು ತತ್ಕಾಲಕ್ಕೆ ಮಾಡುವುದಕ್ಕಾಗುವುದಿಲ್ಲ. ಹೈಕೋರ್ಟಿನಲ್ಲಿರತಕ್ಕ ರಿಟ್ ಕೇಸು ತೀರ್ಮಾನವಾದ ಮೇಲೆ ಆ ಹೈಕೋರ್ಟ್ ನವರ ತೀರ್ಮಾನವನ್ನು ಗಮನದಲ್ಲಿಟ್ಟುಕೊಂಡು ಮುಂದೆ ಶಾಸನವನ್ನು ಮಾಡುತ್ತೇವೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಪಾ.—ನಮ್ಮಲ್ಲಿ ಅನೇಕ ಹಸುಗಳು—ಕರುಗಳನ್ನು ಕೊಂದು ಹಾಕುತ್ತಿರುವುದರಿಂದ ನಮ್ಮ ಮಕ್ಕಳು ಮರಿಗಳಿಗೆ ಹಾಲೇ ಸಿಕ್ಕದೆ ಅಲ್ಲಿ ಬಹಳ ತೊಂದರೆಯಾಗಿದೆಯೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಅದು ನಿಜವಿದ್ದರೂ ಇರಬಹುದು. ಆದರೆ ಸದ್ಯಕ್ಕೆ ನಾವೇನೂ ಮಾಡುವ ಹಾಗಿಲ್ಲ. ಹೈಕೋರ್ಟಿನಲ್ಲಿರತಕ್ಕ ಕೇಸ್ ತೀರ್ಮಾನವಾಗಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹೊಸಕೋಟೆ ತಾಲ್ಲೂಕು ಬೈಲುನರಸಾಪುರದ ಹತ್ತಿರ ಪ್ರತಿ ದಿನವೂ ಗೋವುಗಳನ್ನು ಕೊಂದು ಅಲ್ಲಿಂದ ಎರಡು ಲಾರಿ ಗೋಮಾಂಸವನ್ನು ಬೆಂಗಳೂರಿಗೆ ತಂದು ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಮತ್ತು ಆ ಕೃತ್ಯವನ್ನು ಕೆಲವು ರಾಜಕಾರಣಿಗಳ ಪ್ರಭಾವದಿಂದ ಮುಚ್ಚಿಹಾಕರ ತಕ್ಕದ್ದು ನ್ಯಾಯವೇ?

Sri T. SUBRAMANYA.—It is too much of an assertion made by the Hon'ble Member. The question is whether it has been brought to the notice of the Government that cow slaughter is going on in a particular village—I forget the name of the village and whether because of the influence brought upon them by politicians, the Government have not taken any action. I deny both of them.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—1948ನೆಯ ಕಾಸ್ಟ್ಲಾಟರ್ ನಿಷೇಧದ ಆಕ್ಟ್ ಪ್ರಕಾರ ದನಗಳನ್ನು ಲೈಸೆನ್ಸ್ ಇಲ್ಲದೆ ಸಾಗಿಸಕೂಡದೆಂದಿದ್ದರೂ ದಿನವಹಿ ನೂರಾರು ದನಗಳು ಹಿಂಡುಗಟ್ಟಲೆ ಲೈಸೆನ್ಸ್ ಇಲ್ಲದೆ ಸಾಗಿಸುತ್ತಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಇಲ್ಲ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಲೈಸೆನ್ಸ್ ಕೊಡತಕ್ಕ ಅಧಿಕಾರಿಗಳ ಹತೋಟಿ ಈ ರಾಸುಗಳನ್ನು ಸಾಗಿಸತಕ್ಕವರ ಮೇಲೆ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಇಲ್ಲ. ಆದಾಗ್ಯೂ ನಾನೀಗ ಮತ್ತೆ ಅವರಿಗೆ fresh instructions issue ಮಾಡಲು ಸಿದ್ಧವಾಗಿದ್ದೇನೆ.

Sri C. J. MUCKANNAPPA.—You so vehemently deny the political interference. Is it not a fact that the Mandal Congress Committee of Hoskote and the Congress Committee of Bangalore District passed and sent a resolution to the P.C.C. President and to the Government to the effect that one of the Secretaries and a member are involved in the case?

Sri T. SUBRAMANYA.—I do not know about the P.C.C. I wish the question had been addressed to them. So far as I am concerned, no resolution has been received by the Government, by the Law Department.

Sri G. N. PUTTANNA.—Will the Government be pleased to state when the special squad was appointed and under whose control it is working?

Sri T. SUBRAMANYA.—It is working under the Police Department.

Sri G. N. PUTTANNA.—Under whom, I want to know.

Sri T. SUBRAMANYA.—Under the I.G.P.

Sri G. N. PUTTANNA.—May I know the total strength of the squad?

Sri T. SUBRAMANYA.—I have no idea at present.

Sri S. D. KOTHAVALE.—Whose duty is it to receive complaints?

Sri T. SUBRAMANYA.—Whenever there are complaints they are made to the subordinate official or officer and he enquires and deals with them. Whenever there is an appeal or complaint against an officer himself, Government will come to know about it.